೩. ಬೆಳ್ತಂಗಡಿ ತಾಲ್ಲೂಕು ಮರೋಡಿ ಗ್ರಾಮದ ಮನೆಯ ಶ್ರೀ ಅಣ್ಣು ಪೂಜಾರಿ ಇವರಿಗೆ ಪೋಲೀಸರು ಕೊಟ್ಟ ಕಿರುಕುಳದ ಬಗ್ಗೆ.

ಶ್ರೀ ಕೆ. ವಸಂತ ಬಂಗೇರಾ:—ಮಾನ್ಯ ಅಧ್ಯಕ್ಷರೇ, ಬೆಳ್ತಂಗಡಿ ತಾಲ್ಲೂಕು, ಮರೋಡಿ ಗ್ರಾಮದ ಸುಟರೊಟ್ಟು ಮನೆಯಲ್ಲಿರುವ ಶ್ರೀ ಪೊಂತ್ರ ಪೂಜಾರಿಗಳ ಪುತ್ರ ಅಣ್ಣು ಪೂಜಾರಿಗಳವರು ತಾರೀಖು ೨೬-೧-೮೭ ರಂದು ರಾತ್ರಿ ವೇಣೂರು ಪೋಲೀಸರಿಂದ ಹೊಡೆತ ತಿಂದು ಪ್ರಕೃತ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯಲ್ಲಿ ಚಿಂತಾಜನಕ ಸ್ಥಿತಿಯಲ್ಲಿರುವ ವಿಚಾರವನ್ನು ಸರಕಾರದ ಗಮನಕ್ಕೆ ಈಗಾಗಲೇ ತಂದಿದ್ದರೂ ಯಾವುದೇ ರೀತಿಯ ತನಿಖೆ ನಡೆಯದೇ, ಬಡವರಿಗೆ ನ್ಯಾಯ ದೊರಕದ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ತಾರೀಖು ೨೬-೧-೮೭ ನೇ ಸೋಮವಾರ ರಾತ್ರಿ ವೇಣೂರು ಪೋಲೀಸ್ ಠಾಣೆಯ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಹಾಗೂ ಲೋಕೇಶ್ ಎಂಬ ವಜಾ ಆದ ಪೋಲೀಸ್ ಕಾನ್‌ಸ್ಟೇಬಲ್ ಮತ್ತಿತ್ತ ಮಾಜಿ ಪೂಜಾರಿಗಳ ಮಗ, ತಿಮ್ಮಪೂಜಾರಿ ಸುಟರೊಟ್ಟು ವೀರೋಡಿ, ಇವರು ಮೂವರೂ ಒಟ್ಟು ಸೇರಿ ರಾತ್ರಿ ಸಮಯದಲ್ಲಿ ಶ್ರೀ ಅಣ್ಣು ಪೂಜಾರಿಗಳ ಮನೆಗೆ ಹೋಗಿ ಅವರಿಗೆ ಚೆನ್ನಾಗಿ ಹೊಡೆದುದೇ ಅಲ್ಲದೇ, ಅವರ ಹೆಂಡತಿಯ ಮೇಲೆಯೂ ಕೈಮಾಡಿ, ಅಣ್ಣು ಪೂಜಾರಿಯವರನ್ನು ಬಲಾತ್ಕಾರದಿಂದ ಮನೆಯಿಂದ ಎಳೆದುಕೊಂಡು ಅವರು ಕೊಂಡು ತಂದ ವ್ಯಾನ್‌ನಲ್ಲಿ ಹಾಕಿ ವೇಣೂ ಸ್ಟೇಷನ್‌ಗೆ ತಂದರು. ಪುನಃ ಅಲ್ಲಿ ಎಲ್ಲರೂ ಸೇರಿ ಹೊಡೆದಾಗ ಅಣ್ಣು ಪೂಜಾರಿಗಳಿಗೆ ಸ್ಮೃತಿ ತಪ್ಪಹೋಯಿತು, ಅವರು ಸ್ಮೃತಿ ತಪ್ಪಿಬಿದ್ದರು. ಸ್ಟೇಷನ್‌ನಲ್ಲಿ ಎಸ್.ಐ. ಸಮೇತ ಹೆಚ್ಚಿನವರು ಕುಡಿದು ತೂರಾಡುತ್ತಿದ್ದರು. ಅನಂತರ ಅಣ್ಣು ಪೂಜಾರಿಯವರನ್ನು ಮೂಡಬಿದ್ರೆಗೆ ಕರೆದುಕೊಂಡು ಹೋಗಿ ಖಾಸಗಿ ವೈದ್ಯರಲ್ಲಿ ಪರೀಕ್ಷಿಸಿದಾಗ ತಕ್ಷಣ ಆಸ್ಪತ್ರೆಗೆ ದಾಖಲು ಮಾಡಬೇಕೆಂದು ಅವರು ಸಲಹೆ ಇತ್ತರು. ಅನಂತರ ಅವರನ್ನು ವಾಪಸ್ಸು ತಂದು ಬೆಳ್ತಂಗಡಿ ಆಸ್ಪತ್ರೆಯ ಜಗಲಿಯ ಮೇಲೆ ಹಾಕಿ ಹೋದರು. ಸದರಿ ಅಣ್ಣು ಪೂಜಾರಿಯವರ ಮನೆಯವರು ಸ್ಟೇಷನ್‌ಗೆ ಹೋಗಿ ಕೇಳಿದರೆ ನಮಗೆ ಗೊತ್ತಿಲ್ಲ, ನಾವು ಅವನನ್ನು ತಂದಿಲ್ಲ, ಇಲ್ಲಿಂದ ಯಾರೂ ಪೋಲೀಸರೂ ನಿಮ್ಮ ಮನೆಗೆ ಬಂದಿಲ್ಲವೆಂದು ತಿಳಿಸಿದರು. ಕೊನೆಗೆ ಅವರು ಬೆಳ್ತಂಗಡಿಯ ಆಸ್ಪತ್ರೆಯಲ್ಲಿ ಚಿಂತಾಜನಕ ಸ್ಥಿತಿಯಲ್ಲಿ ಇರುವ ವಿಚಾರ ತಿಳಿದು, ಅಲ್ಲಿಂದ ಅವರನ್ನು ಮಂಗಳೂರು ವೆನ್‌ಲಾಕ್ ಆಸ್ಪತ್ರೆಗೆ ದಾಖಲು ಮಾಡಿದ್ದು, ಈಗಾಗಲೇ ಅವರ ಹೊಟ್ಟೆಯ ಮೂರು ಭಾಗಗಳಿಗೆ ಶಸ್ತ್ರಕ್ರಿಯೆ ಮಾಡಲಾಗಿದೆ. ಕಾರಣ ಪೋಲೀಸರ ಹೊಡೆತದಿಂದ ಹೊಟ್ಟೆಯ ಕೆಲವು ಭಾಗಗಳಲ್ಲಿ ನೆತ್ತರು ಹೆಪ್ಪುಗಟ್ಟಿತ್ತು. ಹೊಟ್ಟೆಯ ಮೇಲ್ಭಾಗದಲ್ಲಿ ಒಂದು ದೊಡ್ಡ ಗಾಯವಾಗಿದ್ದು, ಅದರಲ್ಲಿ ಕೀವು ಬರುತ್ತಿದೆ. ಅಲ್ಲದೇ ಮಲದಲ್ಲಿ ಸರಾಗವಾಗಿ ನೆತ್ತರು, ಕೀವು ಹೋಗುತ್ತಿದೆ. ಈ ವಿಚಾರದಲ್ಲಿ ಮಂತ್ರಿಗಳಿಂದ ಹಿಡಿದು ಎಲ್ಲಾ ಪೋಲೀಸ್ ಅಧಿಕಾರಿಗಳಿಗೂ ದೂರು ಕೊಡಲಾಗಿದೆ. ಆದರೆ ನ್ಯಾಯ ದೊರಕಲ್ಲ. ಸುಮಾರು ಒಂದೂವರೆ ತಿಂಗಳ ಹಿಂದೆನಡೆದ ಈ ಕ್ರೌರ್ಯ ಕೃತ್ಯದ ಬಗ್ಗೆ ಯಾವ ತನಿಖೆಯೂ ಆಗಿಲ್ಲ. ಸದರಿ ವೇಣೂರು ಪಿ.ಎಸ್.ಐ. ರವರ ಮೇಲೆ ಅನೇಕ ರೀತಿಯ ಸಾರ್ವಜನಿಕ ದೂರುಗಳಿದ್ದರೂ ಅವುಗಳಲ್ಲಿ ಅನೇಕ ದೂರುಗಳು ಸಾಬೀತಾಗಿದ್ದರೂ ಅವರ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು ? ಈ ಮೊಕದ್ದಮೆಯಲ್ಲಿ ಸೇರಿದವರೆಲ್ಲರನ್ನೂ ತಕ್ಷಣ ಅಮಾನತ್ತಿನಲ್ಲಿಟ್ಟು ಸೂಕ್ತ ತನಿಖೆ ನಡೆಸಿ ನ್ಯಾಯ ದೊರಕಿಸಿಕೊಡುವಿರಾ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ವಿಧಾನ ಪರಿಷತ್ತಿನಲ್ಲಿದ್ದಾರೆ. ಅವರ ಗಮನಕ್ಕೆ ಈ ವಿಷಯವನ್ನು ತಂದು ಈ ಸಭೆಗೆ ಹೇಳಿಕೆ ಕೊಡುವುದಕ್ಕೆ ತಿಳಿಸುತ್ತೇನೆ.

೪. ದಕ್ಷಿಣ ಕನ್ನಡ ಜಿಲ್ಲೆಯ ಹೆಂಚಿನ ಕಾರ್ಖಾನೆಗಳ ಕಾರ್ಮಿಕರ ಮುಷ್ಕರದ ಬಗ್ಗೆ.

ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಹೆಂಚಿನ ಕಾರ್ಖಾನೆಗಳ ಮಜೂರರು ಕಳೆದ ಕೆಲವು ದಿವಸಗಳಿಂದ ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಮುಷ್ಕರ ಧರಣಿ ನಡೆಸುತ್ತಿದ್ದಾರೆ. ಇದು ವಿಕೋಪಕ್ಕೆ ಹೋಗಿ ಭಾರೀ ಸಂಖ್ಯೆಯ ಮಜೂರರನ್ನು ಬಂಧಿಸಲಾಗಿದೆ ಲಾಠಿ ಪ್ರಹಾರ ಸಹ ಜೋರಾಗಿ ಮಾಡಲಾಗಿದೆ. ಅಲ್ಲದೆ ಜೈಲಿನಲ್ಲಿ ಸ್ಥಳವಿಲ್ಲದೆ ಮಜೂರರು ವರಾಂಡದಲ್ಲಿ ಉಳಿಯುವ ಹಾಗೆ ಆಗಿರುತ್ತದೆ ಎಂದು ತಿಳಿದಿದೆ. ಎಷ್ಟು ಜನ ಮಜೂರರನ್ನು ಬಂಧಿಸ